ತುಮಕೂರು ಡಿಸ್ಟ್ರಿಕ್ಟ್.

ಪ್ರಸಿದ್ಧಪತ್ರಿಕೆ.

1906ನೆ ಇಸವಿ VIIನೆ ನಂಬರು ಮೈಸೂರು ಸೀಮೆಯ ಮುನಿಸಿಪಲ್ ರೆಗ್ಯುಲೇಷನ್ನಿನ 8ನೇ ಸೆಕ್ಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ :—

——ಮೇಲ್ಕಂಡ ರೆಗ್ಯುಲೇಷನ್ನಿನ 7ನೆ ಸೆಕ್ಷನ್‌ಗೆ ಅನುಸಾರವಾಗಿ ಗುಬ್ಬಿ ಟವ್ನ ಮತ್ತು ಆದರ ಮುನಿಸಿಪಾಲಿಟಿಯ ಸರಹದ್ದಿನೊಳಗೆ ಹಾಲಿ ಇರತಕ್ಕ ಹೊಸಪಾಳ್ಯ ಮತ್ತು ಎಕ್ಸ್‌ಟೆರ್ಷ್ ಮತ್ತು ಈ ಕೆಳಗೆ ನಮೂದಿಸಿರುವ ಪಾಳ್ಯಗಳು ಮತ್ತು ಗ್ರಾಮಗಳು ಸೇರಿಸಿ "ಕಾಯಂ ಮುನಿಸಿಪಾಲಿಟಿ" ಯನ್ನಾಗಿ ಮಾಡಲ್ಪಡುತ್ತ.

ಇದಕ್ಕೇನಾದರೂ ಆಕ್ಷೇಪಣೆಗಳು ಇದ್ದಲ್ಲಿ ಅಂಥಾ ಆಕ್ಷೇಪಣೆಗಳನ್ನು ಸಾಕಾದ ಕಾರಣಗಳ ನಿಶಿ ಈ ಪ್ರಸಿದ್ಧಪತ್ರಿಕೆಯು ಗೆಜೆಟ್ಟಿನಲ್ಲಿ ಪ್ರಾಯಿಷಾದ ತಾರೀಖು ಲಾಗಾಯಿತು ಎರಡು ತಿಂಗಳವಳಗಾಗಿ ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ ಲಿಖಿತ ಮೂಲಕವಾಗಿ ಕಳುಹಿಸತಕ್ಕದ್ದಿರುತ್ತೆ.

ಗುಬ್ಬಿ ಟವನು ಅದರ ಎಕ್ಸ್‌ಟೆರ್ಷ್ ಮತ್ತು ಹೊಸಪಾಳ್ಯ ಮತ್ತು ಈ ಕೆಳಗೆ ಕಂಡ ಹೆಸರುಳ್ಳ ಪಾಳ್ಯಗಳು :—

(1) ಹೊಲೇರಹಟ್ಟಿ.
(2) ಮಿಷನೆರಿ ಬಂಗ್ಲೆಗೆ ಲಗಾವಾಗಿರುವ ಪಾಳ್ಯ.
(3) ಕಣಿ ತಿಮ್ಮನ ಪಾಳ್ಯ.
(4) ಬಿಲ್ಲೆ ಪಾಳ್ಯ.
(5) ರಾಯವಾರ ಗ್ರಾಮಕ್ಕೆ ಸೇರಿದ ಪಾಳ್ಯ.
(6) ಚಿಕ್ಕೋನಹಳ್ಳಿ.
(7) ನಡುವಲ ಪಾಳ್ಯ.
(8) ಕಡೇಪಾಳ್ಯ.
(9) ಹೇರೂರು.

ಎಂ. ಶ್ರೀನಿವಾಸಮೂರ್ತಿ,
ಮ್ಯುನಿಸಿಪಾಲಿಟಿಗಳ ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 22ನೆ ಮೇ 1907.

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು ಹೋಬಳಿ ಮದ್ದಿಕ ಯಾಜಮಾನಹಳ್ಳಿ ಗ್ರಾಮದ ಇನಾಂದಾರ್‌ರುಗಳಿಗೆ ಉದ್ದರಿಂದ ತಿಳಿಯಪಡಿಸುವದೇನಂದರೆ :—

ಹೇಮಗಿರಿ ಅಣೆಕಟ್ಟು ಮತ್ತು ನಾಲಾ ರಿಪೇರಿ ಬಗ್ಗೆ ತಗಲಿದ ಖರ್ಚಿನ ಕಂಟ್ರಿಬ್ಯೂಷ್ಯ ವಗ್ಗೈರೆ ಹಣವನ್ನು ಈ ಇನಾಂದಾರ್‌ರಿಗೆ ಸರಕಾರದಿಂದ ಸಾಲ ಕೊಟ್ಟಂತೆ ಭಾವಿಸಬೇಕೆಂತಲೂ ಅದು ತೀರುವ ವರಿವಿಗೂ ಮದ್ದಿಕ ಯಾಜಮಾನ ಹಳ್ಳಿ ಗ್ರಾಮವನ್ನು ಸರಕಾರದ ಮ್ಯಾನೇಜುಮೆಂಟಿಗೆ ತೆಗದುಕ್ಕೊಂಡು ಅದರ ವಸೂಲಿಯನ್ನು ಸಾಲಕ್ಕೆ ಜಮಾ ಕಟ್ಟಿಕೊಳ್ಳಬೇಕೆಂದು, ವಗ್ಗೈರೆ ಗೌರ್ನಮೆಂಟಿನಿಂದ 22—12—04ನೆ ಮುಕ್ಕಂ 5436-6 ಮಿಸ್ 39—00—46ನೆ ನಂಬರ್ ಪ್ರೊಸೀಡಿಂಗ್ಸ್ ತಲಫಿರುವದು ಸರಿಯಷ್ಟೆ. ಸದರಿ ಮದ್ದಿಕ ಯಾಜಮಾನಹಳ್ಳಿ ಗ್ರಾಮವು ಈ ವರಿಗೂ ಇದ್ದಂತೆ ಮುಂದೆಯೂ ಸರ್ಕಾರಿ ಮ್ಯಾನೇಜ್‌ಮೆಂಟನಲ್ಲಿರುವದಕ್ಕೂ ಮತ್ತು ಸದರಿ ಗ್ರಾಮದ ವಸೂಲಿ ಪೈಕಿ ಕೆಲವು ಮೊಬಲಗನ್ನು ಹೇಮಗಿರಿ ಅಣೆಕಟ್ಟು ಮತ್ತು ನಾಲಾ ರಿಪೇರಿ ಬಗ್ಗೆ ಉಪಯೋಗಿಸಿಕೊಳ್ಳುವದಕ್ಕೂ ಮತ್ತು ಬಾಕಿ ಮೊಬಲಗನ್ನು ಮೇಲ್ಕಂಡ ಸಾಲಕ್ಕೂ ಸಹ ವಜಾ ಹಾಕಿಕೊಳ್ಳಬಹುದೆಂದು ಇನಾಂದಾರ್‌ರುಗಳು ಈ ಪರತ್ತುಗಳನ್ನು ನಮೂದಿಸಿ ಸರ್ತಾರಕ್ಕೆ ಇನಾಂದಾರ್‌ರುಗಳು ದಸ್ತೈವಜನ್ನು ಬರದುಕೊಡತಕ್ಕದ್ದು ಅವಶ್ಯಕವಾದ್ದರಿಂದ ಈ ನೋಟೀಸು ಮೈಸೂರ ಗೆಜೆಟ್ಟಿನಲ್ಲಿ ಪ್ರಾಯಿಷ್ ಆದ ಲಾಗಾಯಿತು ಒಂದು ತಿಂಗಳೊಳಗಾಗಿ ಕೃಷ್ಣರಾಜಪೇಟೆ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ರೂಬರೂಬ್ ಹಾಜರಾಗಿ ದಸ್ತೈವಜನ್ನು ಬರದುಕೊಡತಕ್ಕದ್ದು. ಹಾಗೆಮಾಡದೆ ತಪ್ಪಿದಲ್ಲಿ ಇನಾಂದಾರ್‌ರುಗಳು ಮೇಲಿನ ಪರತ್ತುಗಳಿಗೆ ಅಂಗೀಕಾರಪಟ್ಟಂತೆ ಭಾವಿಸಿ ಕಾನೂನು ಮೇರೆಗೆ ಜಾರಿಯಲ್ಲಿತರುತ್ತೆ.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟ್.

ಬೇಲೂರು ಸೇತುವೆಮೇಲೆ ಸುಂಕ ವಸೂಲ್ಮಾಡುವ ಹಕ್ಕು ಹರಾಜು ಇಸ್ತಿಹಾರ್.

ಹಾಸನ ಡಿಸ್ಟ್ರಿಕ್ಟ್ ಬೇಲೂರು ತಾಲ್ಲೂಕು ಬೇಲೂರು ಸೇತುವೆಯಮೇಲೆ 1907ನೆ ಇಸವಿ ಜುಲೈ ಗುರ್ರು ಲಾಗಾಯಿತು 1908ನೆ ಜೂ ಆಖೈರುವರೆಗೆ ಸುಂಕ ವಸೂಲ್ಮಾಡುವ ಹಕ್ಕನ್ನು ಬೇಲೂರು ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ ತಾರೀಖು 10ನೆ ಸೋಮವಾರ ದಿವಿ 12 ಘಂಟೆಗೆ ಸಕ್ಲೇಶಪುರದ ಸೀನಿಯರ್ ಅಸಿಸ್ಟೆಂಟ್ ಕಮಿಷನರವರ ರೂಬರೂಬು ಹರಾಜು ಮಾಡಿಸಲ್ಪಡುತ್ತೆ.

ಪರಾ :—ಹರಾಜು ಪರತ್ತು ವಗ್ಗೈರೆಯನ್ನು 1907ನೆ ಇಸವಿ ಮೇ 30ನೆ ತಾರೀಖು 22ನೆ ನಂ. ಮೈಸೂರ್ ಗಜೆಟ್ಟಿನ ಎರಡನೆ ಭಾಗದಲ್ಲಿ 256ನೆ ಪುಟದಲ್ಲಿ ಪ್ರಿಂಟಾಗಿರುವದನ್ನು ನೋಡಿಕೊಳ್ಳತಕ್ಕದ್ದು.